SRI S. B. NAGARAL (Minister of State for Minor Irrigation).—

(*a*) **No**

(*b*) The feeder channel from river North Pennar (North Pinakini) to Choulur tank is exitting from a long time.

(*c*) and (d) Does not arise.

ಶ್ರೀ ಮುದ್ದುರಾಮಯ್ಯ.— ಸ್ವಾಮಿ, ಒಪ್ಪಂದ ಆಗಿಲ್ಲ ಎಂದು ಹೇಳಿದ್ದೀರಿ; ಒಪ್ಪಂದ ಆಗಿಲ್ಲದೇ ಇದ್ದರೂ ಯಂಕಾರ್ಲ ಮತ್ತು ಕಡಗತೂರೂ ಕೆರೆಗಳಿಗೆ ನೀರನ್ನು ಒದಗಿಸಿಕೊಡುವುದಕ್ಕೆ ಆವಕಾಶವಿರುವುದರಿಂದ, ಆಂಧ್ರ, ಸರ್ಕಾರದೊಡನೆ ವ್ಯವಹರಿಸಿ ಅನುಕೂಲ ಮಾಡಿಕೊಡುವುದಕ್ಕೆ ಆಗೇತ್ತದೆಯೇ ?

† ಶ್ರೀ ಎಸ್. ಬಿ. ನಾಗರಾಳ.— ಮೂರು ಕೆರೆಗಳಿಗೂ ನೀರಿನ ಕೊರತೆ ಇಲ್ಲ. ಈಗ ಕುಮದ್ವತಿ ನದಿಯಿಂದ ನೀರು ಬರುತ್ತಿದೆ.

ಶ್ರೀ ಮುದ್ದುರಾಮಯ್ಯ — ಆಂಧ್ರ ಗಡಿಯಿಂದ ಸುಮಾರು ೨೦ ಮೈಲಿ ಒಳಗೊಂಡಿರತಕ್ಕಂಥ ಸ್ಥ ಪ್ರದೇಶಗಳಿಗೆ ಏನಾದರೂ ವ್ಯವಸ್ಥೆ ಮಾಡಬೇಕಲ್ಲವೇ ಸ್ವಾಮಿ ?

ಶ್ರೀ ಎಸ್. ಬಿ. ನಾಗರಾಳ.— ೧೯೬೨ರಲ್ಲಿ ಮದ್ರಾಸ್ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಒಪ್ಪಂದ ಆಗಿರತಕ್ಕದ್ದು.

ಶ್ರೀ ಮುದ್ದುರಾಮಯ್ಯ — ಆ ಒಪ್ಪಂದವನ್ನು ವಜಾ ಮಾಡುವುದಕ್ಕೆ ಸರ್ಕಾರ ಗಮನ ಕೊಡುತ್ತದೆಯೇ ಸ್ವಾಮಿ ?

ಶ್ರೀ ಎಸ್. ಬಿ. ನಾಗರಾಳ.— ಆಲೋಚನೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.— ಒಪ್ಪಂದದ ಪ್ರಕಾರ ಕೆಲವು ಭಾಗ ಸೇರಿದೆ. ನಮಗೂ ತಮಿಳು ನಾಡಿಗೂ ಮತ್ತು ಆಂಧ್ರಪ್ರದೇಶಕ್ಕೂ ನದೀ ನೀರಿನ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ ಈ ನದಿಗೆ ಸಂಬಂಧಪಟ್ಟಹಾಗೆ ಚರ್ಚೆ ಮಾಡಿ, ಜನಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ.— ನದಿ ವಿಷಯದಲ್ಲಿ ಹೇಳಬೇಕಾದರೆ, ನೋಟೀಸ್ ಬೇಕಾಗುತ್ತದೆ.

Market Yard Building at Indi

41 SRI J. L. KABDE (Ballolli).—Will the Minister for Co-operation be pleased to state :—

(*a*) whether the Agricultural Produce Marketing Committee in Indi proper is functiong :

(*b*) if not, the reasons for the same.

(*c*) why Government have not taken action to complete and utilise the Market Yard Building at Indi,

(*d*) the amount spent on the Market Yard Building,

(*e*) whether it has come to the notice of Government that the merchants doing business outside the Market Yard are harassing the ryots ?

SRI R. D KITTUR (Minister of State for Regulated Markets) on behalf of SRI K. H. RANGANATH (Minister for Co-operation).—

(*a*) Yes.

(*b*) Does not arise.

(*c*) The Market Committee, Bijapur has acquired 6 Acres and 25 Guntas of land in S.No. 391 of Indi Town for the establishment of Separate and independent Sub-market Yard at Indi and the following developmental works have been completed:—

(1)	Office Building	...	Rs. 60,166—10
(2)	Canteen Building	...	Rs. 21 438—48
(3)	Sale Hall	...	Rs. 60,092—25
(4)	Cattle Shed	...	Rs. 54 373—02
(5)	Ryot Bhavan	...	Rs, 1,45,201—96

The office building constructed at the proposed Sub-market Yard is being utilised for the present. The Sale-Hall, Cattle shed, Ryot Bhavan and Canteen will be utilised after the Sub-market Yard is declared by the Chief Marketing Officer after following the procedure prescribed under the Law.

(*d*) The total amount spent for the prosposed Sub-market Yard is Rs. 3,41,271—81 .

(*e*) No

ಶ್ರೀ ಜೆ ಎಲ್ ಕಬಾಡೆ.—ಇಂಡಿಯಲ್ಲಿಗಂವ ವ್ಯವಸಾಯೋತ್ಪನ್ನ ಮಾರಂಕಟ್ಟೆ ಕಟ್ಟಡ ಕಟ್ಟಲಿಕ್ಕೆ ೩,೪೨,೨೭೧–೮೧ ರೂಪಾಯಿಗಳಂ ಖರ್ಚಾಗಿದೆ ಎಂದು ಹೇಳಿದ್ದೀರಿ ಆದರೆ ಮಾರ್ಕೆಟ್ ಶುರು ಮಾಡಬೇಕಾದರೆ, ಪ್ರಧಾನ ಮಾರುಕಟ್ಟೆ ಅಧಿಕಾರಿಯವರು ಕಾನೂನಿನ ಮೇರೆಗೆ ಗೊತ್ತುಪಡಿಸಿದ ಕಾರ್ಯವಿಧಾನವನ್ನು ಅನುಸರಿಸಿ ಉಪಮಾರುಕಟ್ಟೆಯನ್ನು ಉದ್ಘಾಟಿಸಿದ ನಂತರ ಮಾರಾಟದ ಹಜಾರ, ಜಾನುವಾರು ಕೊಟ್ಟಿಗೆ, ರೈತ ಭವನ ಹಾಗೂ ಉಪಹಾರ ಮಂದಿರಗಳನ್ನು ಬಳಿಸಿಕೊಳ್ಳಲಾಗುವುದು ಎಂದು ಹೇಳಿದ್ದೀರಿ. ಇದನ್ನು ಕಟ್ಟಿ ಎಷ್ಟು ವರ್ಷ ಆಯಿತು ?

† ಶ್ರೀ ಆರ್. ಡಿ. ಕಿತ್ತೂರ್.—ಅದರ ತಾರೀಖು ನನ್ನ ಕಡೆ ಇಲ್ಲ.

ಶ್ರೀ ಜೆ. ಎಲ್. ಕಬಾಡೆ — ಇಂಡಿ ಟೌನಿನಲ್ಲಿ ಮಾರ್ಕೆಟ್ ನಡೆಯುತ್ತಿದೆ, ಯಾರು ಬಂದು ಉದ್ಘಾಟನೆ ಮಾಡಿದರು ? ಮಾರಾಟ ಮಾಡತಕ್ಕದ್ದು ಕೂಡ ಕಾನೂನಿನ ಪ್ರಕಾರ ವಿರೋಧವಾಗಿದೆ. ಅದಕೋಸ್ಕರ ಎಷ್ಟು ವರ್ಷಗಳು ಆಯಿತು ಇದನ್ನು ಕಟ್ಟಿ ?

ಶ್ರೀ ಆರ್. ಡಿ. ಕಿತ್ತೂರ್.— ಮಾರುಕಟ್ಟೆ ಸಮಿತಿಯಲ್ಲಿ ನಿರ್ಣಯ ಅಂಗೀಕಾರ ಮಾಡಿ ಇಂಡಿ ಟೌನಿನ ಮಾರ್ಕೆಟ್ ಯಾರ್ಡ್ ಅಭಿವೃದ್ಧಿಗೆ ಪ್ರಯತ್ನ ಮಾಡಿದ್ದು; ಚೀಫ್ ಮಾರ್ಕೆಟಿಂಗ್ ಆಫೀಸರ್ ಆಫ್ ಮಾರ್ಕೆಟ್ ಯಾರ್ಡ್ ಡೆವಲಪ್‌ಮೆಂಟ್ ಬೋರ್ಡಿನವರಿಂದ ಮಾರ್ಕೆಟ್ ಯಾರ್ಡ್‌ಗೆ ಒಪಿನಿಯನ್ ಬರಲಿಲ್ಲ. ಅದಕೋಸ್ಕರ ಇದನ್ನು ಅನೌನ್ಸ್ ಮಾಡಲಿಲ್ಲ.

ಶ್ರೀ ಬಿ. ಎಲ್. ಕಬಾಡೆ.— ಮಾರ್ಕೆಟ್‌ಯಾರ್ಡ್ ಅನೌನ್ಸ್ ಮಾಡಲಿಲ್ಲ ಎಂದು ಹೇಳಿದರು. ಜಿಲ್ಲಾ ಮಾರ್ಕೆಟ್ ಕಮಿಟಿಯಲ್ಲಿ ಸಬ್ ಮಾರ್ಕೆಟ್ ಯಾರ್ಡ್‌ನ್ನು ತೆಗೆದುಕೊಳ್ಳಬೇಕೆಂದು ಠರಾವು, ಮಾರ್ಕೆಟ್‌ಯಾರ್ಡ್ ಕಟ್ಟಿದ್ದಾರೆ. ಇದನ್ನು ಕಟ್ಟಿ ಎಷ್ಟು ವರ್ಷ ಆಯಿತು ?

SRI R. D. KITTUR.—This Market Committee of Bijapur has proposed to de-notify the existing market yard on S. No. 391 which is a new one. This proposal has been referred by the Chief Marketign officer to the Karnataka State Agricultural Market Board on 25-8-1975 for their opinion as per Section 112 of Karnataka Agricultural produce Marcket Act. In this connection it may be mentioned that the majority of the State Agricultural Market Committee Members have retired. Hence the Marketing Board could not meet. Now that bye-elections to the State Marketing Board have been completed, this will be taken up.

ಶ್ರೀ ಜಿ. ಎಲ್. ಕಬಾಡೆ.—ಈ ಜಿಲ್ಲಾ ಮಾರ್ಕೆಟಿಂಗ್ ಸಮಿತಿಯವರು ಏನು ಒಂದು ನಿರ್ಣಯ ಮಾಡಿದರು ಎಂದರೆ ಇಂಡಿ ಸಬ್ ಮಾರ್ಕೆಟ್ ಯಾರ್ಡ್‌ನ್ನು ತೆಗೆಯಬೇಕು ಅಂತ ನಿರ್ಣಯ ಮಾಡಿದರು. ಅದರ ಬಗ್ಗೆ ಬಿಲ್ಡಿಂಗ್ ಪಗ್ಯೆರೆ ಕಟ್ಟಿಸಿ ನಾವು ಈ ಕೆಲಸವನ್ನೆಲ್ಲಾ ಪೂರ್ತಿ ಮಾಡಿದ್ದೇವೆ ಆಲ್ಲಿ ಒಂದು ಸಬ್ ಮಾರ್ಕೆಟ್ ಯಾರ್ಡ್‌ನ್ನು ಮಾಡಬೇಕು ಅಂತ ಒಂದು ನಿರ್ಣಯಮಾಡಿ ಅದನ್ನು ಕೈಗೊಳ್ಳುವಾಗ ಕರ್ನಾಟಕ ಸರ್ಕಾರದ ಚೀಫ್ ಮಾರ್ಕೆಟಿಂಗ್ ಆಫೀಸರ್ ಏನು ಇದ್ದಾರೋ ಅವರ ಪರವಾನಗೆಯನ್ನು ತೆಗೆದುಕೊಳ್ಳದೆ ಆ ಜಿಲ್ಲಾ ಸಮಿತಿಯವರು ಆ ಕಟ್ಟಡಕ್ಕೆ 3 ಲಕ್ಷ 41 ಸಾವಿರ ರೂಪಾಯಿ ಖರ್ಚು ಮಾಡಿದರು. ಇವರಿಗೆ ಯಾರ ಪರವಾನಗೆ ಇತ್ತು. ಇಷ್ಟೂಂದು ದುಡ್ಡನ್ನು ಖರ್ಚು ಮಾಡಬೇಕಾದರೆ ಮೇಲಾಧಿಕಾರಿಯಿಂದ ಪರವಾನಿಗೆ ಪಡೆದಿದ್ದಾರೇ? ಒಂದು ವೇಳೆ ಅವರಿಂದ ಪರವಾನಿಗೆ ಪಡಿಯದೇ ಇದ್ದರೆ ಮಾರ್ಕೆಟಿಂಗ್ ಆಫೀಸರ್ ಮೇಲೆ ಏನಾದರೂ ಶಿಸ್ತಿನ ಕ್ರಮ ತಾವು ಕೈಗೊಂಡಿದ್ದೀರಾ ?

SRI R. D. KITTUR.—Before shifting the sub-market area there, all, facilities have to be provided. That is why buildings were constucted in the Market-yard, Indi, and approval will be granted soon after the Board gives its opinion.

ಶ್ರೀ ಜಿ. ಎಲ್. ಕಬಾಡೆ.— ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳಿಂದ ನಮಗೆ ಇದರ ಬಗ್ಗೆ ಸರಿಯಾದ ಮಾಹಿತಿ ಸಿಕ್ಕಿಲ್ಲ. ಇದಕ್ಕೆ ತಾವು ರಕ್ಷಣೆ ನೀಡಬೇಕು.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಹೇಳುವ ಉತ್ತರಕ್ಕೆ ನಾನು ಉತ್ತರ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಜಿ. ಎಲ್. ಕಬಾಡೆ.—ಅಧ್ಯಕ್ಷರೇ, ಇಷ್ಟೂಂದು ದುಡ್ಡು ಖರ್ಚು ಮಾಡಿ ಈ ಕಟ್ಟಡ ಕಟ್ಟಿಸಬೇಕಾದರೆ ಇದಕ್ಕೆ ಯಾರು ಅಧಿಕಾರ ಪಡೆದು ಖರ್ಚು ಮಾಡಿದರು ಅಂತ ನಾನು ಕೇಳಿದ್ದು. ಇದಕ್ಕೆ ಅವರು ಮಾಹಿತಿ ಕೊಡಲೇಬೇಕು.

ಶ್ರೀ ಆರ್. ಡಿ. ಕಿತ್ತೂರ್.—ಅದಕ್ಕೆ ಒಪ್ಪಿಗೆ ಕೊಡಬೇಕಾದರೆ ಚೀಫ್ ಮಾರ್ಕೆಟಿಂಗ್ ಆಫೀಸರು ಇದ್ದಾರೆ. ಅವರು ಕೊಟ್ಟಿದ್ದಾರೆ.

ಶ್ರೀ ಜಿ. ಎಲ್. ಕಬಾಡೆ.—ಅಧ್ಯಕ್ಷರೇ, ನನಗೆ ಸರಿಯಾದ ಉತ್ತರ ಸಿಕ್ಕಲಿಲ್ಲ.

ಅಧಕ್ಷರು.—ಮಾನ್ಯ ಸದಸ್ಯರಿಗೆ ಬೇಕಾದ ಉತ್ತರ ಕೊಡುವುದಕ್ಕೆ ನನಗೆ ಸಾಧ್ಯವಿಲ್ಲ.

ಶ್ರೀ ಜಿ. ಎಲ್. ಕಬಾಡೆ.—ಸರ್ಕಾರದಿಂದ ಇದಕ್ಕೆ ಸರಿಯಾದ ಉತ್ತರ ಬರುವವರಿಗೂ ದನ್ನು ತಡೆಹಿಡೆದರೆ ಬಹಳ ಸಂತೋಷ, ಅಧ್ಯಕ್ಷರೇ.

ಅಧ್ಯಕ್ಷರು.— ಅದಕ್ಕೆ ಬೇರೆ ಬೇರೆ ನಿಯಮಗಳು ಇವೆ. ಅದನ್ನು ಅನುಸರಿಸಬೇಕು.